# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ –145ರ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಹೊಂಬೇಗೌಡನಗರ ವಾರ್ಡ್ 177(145) ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯವರಾದ ಶ್ರೀ. ಮಹಾಂತೇಶ್ ಬುರನಾಪುರ ಕಾರ್ಯಪಾಲಕ ಅಭಿಯಂತರರು (ಯೋಜನೆ–ದಕ್ಷಿಣ) ಮತ್ತು ನೋಡಲ್ ಅಧಿಕಾರಿ ಅಪ್ಪಣೆ ಮೇರೆಗೆ ದಿನಾಂಕ:17/09/2022ರ ಶನಿವಾರದಂದು ಮಧ್ಯಾಹ್ನ 3.30 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸದಸ್ಯರಿಗೆ ಆಹ್ವಾನ ನೀಡಿದ್ದು, ಸಭೆಗೆ ಹಾಜರಾಗಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರ ಅಧ್ಯಕ್ಷತೆಯೊಂದಿಗೆ ಸಭೆಯನ್ನು ನಡೆಸಲಾಯಿತು.

**ಹಾಜರಿದ್ದವರು:–**

1. ಶ್ರೀ. ಮಹಾಂತೇಶ್ ಬುರನಾಪುರ ಕಾರ್ಯಪಾಲಕ ಅಭಿಯಂತರರು (ಯೋಜನೆ–ದಕ್ಷಿಣ) ಮತ್ತು ನೋಡಲ್ ಅಧಿಕಾರಿ.
2. ಶ್ರೀ. ವಿಜಯಕುಮಾರ್ ಕೆ.ಎಸ್. ಸಹಾಯಕ ಅಭಿಯಂತರರು ವಾರ್ಡ್–177.
3. ಶ್ರೀ. ದೇವವರ್ಮ, ಕೆಲಸ ಪರಿವೀಕ್ಷಕರು ವಾರ್ಡ್–177.
4. ಶ್ರೀ. ಎಸ್. ಕುಮಾರ್ ವೇಲ್, ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–177.
5. ಶ್ರೀ. ಆರ್. ಉಮಾಶಂಕರ್, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–177.
6. ಶ್ರೀ. ಸಾರ್ಥಿಕ್ ಎಸ್.ಎಲ್, ಪಿ.ಎಸ್.ಐ ವಿಲ್ಸನ್‌ಗಾರ್ಡನ್ ಸಂಚಾರ ಪೊಲೀಸ್ ಠಾಣೆ.
7. ಶ್ರೀ. ಶ್ರೀಧರ, ಘನತ್ಯಾಜ್ಯ ವಿಲೇವಾರಿ ಗುತ್ತಿಗೆದಾರರ ಪರವಾಗಿ.
8. ಹಾಗೂ ವಾರ್ಡಿನ ಸ್ಥಳೀಯರು.

**ಸಭೆಗೆ ಗೈರು ಹಾಜರಾದ ಇಲಾಖೆಗಳು:–**

1. ಪೊಲೀಸ್ ಇಲಾಖೆ ಅಧಿಕಾರಿಗಳು (ಕಾನೂನು ಸುವ್ಯವಸ್ಥೆ) ಆಡುಗೋಡಿ.
2. ವಿಲ್ಸನ್‌ಗಾರ್ಡನ್ ಪೊಲೀಸ್ ಠಾಣೆ ಕಾನೂನು ಸುವ್ಯವಸ್ಥೆ ವಾರ್ಡ್ 177.
3. ಸಹಾಯಕ ಇಂಜಿನಿಯರ್ (ಬೆಸ್ಕಾಂ).
4. ಅರಣ್ಯ ಇಲಾಖೆಯ ಅಧಿಕಾರಿಗಳು.
5. ತೋಟಗಾರಿಕೆ ಇಲಾಖೆ, ಮೇಲ್ವಿಚಾರಕರು ವಾರ್ಡ್ 177.
6. ಸಹಾಯಕ ಇಂಜಿನಿಯರ್ (BWSSB).
7. ಸ.ಕಾ.ನಿ. ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯ, ಬಿಬಿಎಂಪಿ ಕೇಂದ್ರ ಕಛೇರಿ.
8. ಸ.ಕಾ.ನಿ. ಅಭಿಯಂತರರು, ಯೋಜನೆ–ಕೇಂದ್ರ, ಬಿಬಿಎಂಪಿ ಕೇಂದ್ರ ಕಛೇರಿ.
9. ಸ.ಕಾ.ನಿ. ಅಭಿಯಂತರರು, ಬೃಹತ್ ನೀರುಗಾಲುವೆ ಬಿಬಿಎಂಪಿ ಜಯನಗರ ವಾಣಿಜ್ಯ ಸಂಕೀರ್ಣ ಕಟ್ಟಡ.

1. ವಾರ್ಡಿನ ಸ್ಥಳೀಯರು ಮಾತನಾಡಿ ವಿಲ್ಸನ್‌ಗಾರ್ಡನ್ 9ನೇ "ಎ" ಅಡ್ಡರಸ್ತೆಯಲ್ಲಿ ಪೋಲೀಸ್ ಸಿಬ್ಬಂದಿಗಳು ರಾತ್ರಿ ಗಸ್ತನ್ನು ನಿರ್ವಹಿಸಬೇಕೆಂದು ಸಬೆಯಲ್ಲಿ ಕೋರಿರುತ್ತಾರೆ.

2. ವಾರ್ಡಿನ ಸ್ಥಳೀಯರು ಮಾತನಾಡಿ ವಿಲ್ಸನ್‌ಗಾರ್ಡನ್ 8ನೇ ಅಡ್ಡರಸ್ತೆಯಲ್ಲಿ ಮರದ ಕೊಂಬೇಗಳನ್ನು ತೆರವುಗೊಳಿಸುವಂತೆ ಕೋರಿರುತ್ತಾರೆ.

3. ವಾರ್ಡಿನ ಸ್ಥಳೀಯರು ಮಾತನಾಡಿ ವಿಲ್ಸನ್‌ಗಾರ್ಡನ್‌ನ ಪಾದಚಾರಿ ಮಾರ್ಗದಲ್ಲಿರುವ ಫುಟ್‌ಪಾತ್ ಟೈಲ್ಸ್‌ಗಳನ್ನು ಸರಿಪಡಿಸಲು ಕೋರಿರುತ್ತಾರೆ.

4. ವಾರ್ಡಿನ ಸ್ಥಳೀಯರು ಮಾತನಾಡಿ ವಿಲ್ಸನ್‌ಗಾರ್ಡನ್ 9ನೇ ಅಡ್ಡರಸ್ತೆಯಲ್ಲಿ ಗಂಗಮ್ಮ ಹೊಂಬೇಗೌಡ ಬಾಲಕಿಯರ ಶಾಲೆಯ ಮುಂಭಾಗದಲ್ಲಿ ಹಾಗೂ 5ನೇ ಅಡ್ಡರಸ್ತೆ ವಿಲ್ಸನ್‌ಗಾರ್ಡನ್‌ನಲ್ಲಿ ರಸ್ತೆ ಉಬ್ಬನ್ನು ಅಳವಡಿಸುವಂತೆ ಕೋರಿರುತ್ತಾರೆ.

5. ವಾರ್ಡಿನ ಸ್ಥಳೀಯರು ಮಾತನಾಡಿ ಪ್ರತಿ ನಿತ್ಯ ಕಸ ಸಂಗ್ರಹಣೆ ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ಸಭೆಯಲ್ಲಿ ತಿಳಿಸಿರುತ್ತಾರೆ ಹಾಗೂ ಹೂವಿನ ಮಾರುಕಟ್ಟೆಯನ್ನು ತೆರವುಗೊಳಿಸಬೇಕೆಂದು ಕೋರಿರುತ್ತಾರೆ.

6. ಘನತ್ಯಾಜ್ಯ ನಿರ್ವಹಣೆ ವಿಭಾಗದ ಕಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ಕ್ರಮ ವಹಿಸಲು ಸಭೆಯಲ್ಲಿ ತಿಳಿಸಲಾಯಿತು.

ಮೇಲಿನ ಈ ಎಲ್ಲಾ ಚಟುವಟಿಕೆಗಳನ್ನು ಕ್ರಮಬದ್ಧವಾಗಿ ಸಂಬಂಧಪಟ್ಟ ಇಲಾಖಾವಾರು ಸಮನ್ವಯ ಸಾಧಿಸಿಕೊಂಡು ನಿರ್ವಹಿಸಲು ಎಲ್ಲಾ ಸಿಬ್ಬಂಧಿ ವರ್ಗದವರು ಒಂದುಗೂಡಿ ಈ ಕಾರ್ಯದಲ್ಲಿ ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ಹೇಳುತ್ತಾ ಸಭೆ ಮುಕ್ತಾಯಗೊಳಿಸಿದರು.

ಕಾರ್ಯದರ್ಶಿ & ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ – 177(145)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು & ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ – 177(145)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ